ಹೊಸ ಗುತ್ತಿಗೆ ನಿಯಮಾವಳಿ ಜಾರಿಗೆ ಬರುವುದಕ್ಕಿಂತ ಮೊದಲೇ ಗುತ್ತಿಗೆಗೆ ನೀಡಲಾಗಿದೆ ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ ಪಸಂಮೀ/ 146/ಮೀಇಇ/2005 ದಿನಾಂಕ 18–09–2006 ರಂತೆ ಸದರಿ ಗುತ್ತಿಗೆ ಅವಧಿಯನ್ನು ಮತ್ತೆರಡು ವರ್ಷಗಳ ಅವದಿಗೆ ಅಂದರೆ 2008–09 ರ ವರೆಗೆ ದಿನಾಂಕ 30–06–2009 ರವರೆಗೆ ವಿಸ್ತರಿಸಲಾಗಿದೆ

ಈ) ಮೀನಿಗೆ ದೊರೆಯುವ ಬೆಲೆ ಕುರಿತಂತೆ ಮೀನುಗಾರಿಕೆ ಇಲಾಖೆಯು ನಿಯಂತ್ರಣ ಹೊಂದಿರುವುದಿಲ್ಲ

ಉ) ಜಮಖಂಡಿ ತಾಲ್ಲುಕಿನ 40 ಕಿ.ಮೀ ಕೃಷ್ಣಾ ನದಿ ಭಾಗದ ಮಿನು ಪಾಶುವಾರು ಹಕ್ಕನ್ನು ರಾಜೀವ್‌ಗಾಂಧಿ ಮೀನುಗಾರರ ಸಹಕಾರ ಸಂಘ ನಿ., ಜಮಖಂಡಿ ಇವರಿಗೆ ಗುತ್ತಿಗೆಗೆ ನೀಡಲಾಗಿದೆ ಈ ಅವಧಿಯ 2008–09 ರವರೆಗೆ ಅಂದರೆ ದಿನಾಂಕ 30–06–2009 ರವರೆಗೆ ಇರುತ್ತದೆ ಆ ಬಳಿಕ ಉಳಿದ ಸಂಘಗಲಿಗೆ ಗುತ್ತಿಗೆಯನ್ನು ನಿಡುವ ಕುರಿತು ಅರ್ಜಿಗಳು ಬಂದಲ್ಲಿ ಪರಿಶೀಲಿಸಲಾಗುವುದು

242(400) ಶ್ರೀ ಸೊಮಣ್ಣ ವಿ (ಬಿನ್ನಿಪೇಟೆ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಜನವರಿಯಿಂದ ಇಲ್ಲಿಯವರೆಗೆ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಎಷ್ಟು?

ಆ) ಆ ರೀತಿ ಆತ್ಮಹತ್ಯೆಗೆ ಶರಣಾಗಲು ಕಾರಣಗಳೇನು?

ಇ) ಇಲ್ಲಿಯವರೆಗೆ ಆತ್ಮಹತ್ಯೆ ಮಾಡಿಕೊಂಡ ಎಷ್ಟು ರೈತರ ಕುಟುಂಬಗಳಿಗೆ ಎಷ್ಟು ಪರಿಹಾರ ನೀಡಲಾಗಿದೆ?

ಈ) ರೈತರ ಬೆಳೆಗೆ ಸರಿಯಾದ ಬೆಲೆ ಹಾಗೂ ಲೇವಾದೇವಿಗಾರರ ಹಿಂಸೆಯಿಂದ ರೈತರನ್ನು ಮುಕ್ತರನ್ನಾಗಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಂಡೆಪ್ಪ ಕಾಶಂಪೂರ

ಅ) ಜನವರಿ 2007 ರಿಂದ ಜೂನ್ 07 ರವರೆಗೆ 113 ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿವೆ

ಆ) ಕೃಷಿ ಸಾಲ ಸಾಮಾಜಿಕ ಸಂಸ್ಥೆಗಳ ವಿಫಲತೆ, ಸಡಿಲಗೊಳ್ಳುತ್ತಿರುವ ಸಾಮಾಜಿಕ ಭದ್ರತೆ ದುಶ್ಚಟಗಳು ಮಕ್ಕಳ ಮದುವೆಯ ಸಾಲ, ಅನಾರೋಗ್ಯ ಬಗೆಹರಿಸದ ಕುಟುಂಬ ಸಮಸ್ಯೆಗಳು ಇತ್ಯಶದಿಗಳು ರೈತರ ಆತ್ಮಹತ್ಯಗೆ ಕರಣಗಳಿರಬಹುದೆಂದು ಗುರುತಿಸಲಾಗಿದೆ ಇದನ್ನು ತಡೆಗಟ್ಟಲು ಸರ್ಕಾರವು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ

ಇ) ಇಲ್ಲಿಯವರೆಗೆ (2003–07) ಆತ್ಮಹತ್ಯೆ ಮಾಡಿಕೊಂಡ ಕುಟುಂಬಗಳಿಗೆ ತಲಾ 100 ಲಕ್ಷ ರೂಗಳಂತೆ 607 ಲಕ್ಷ ರೂಗಳ ಪರಿಹಾರವನ್ನು ಮಂಜೂರು ಮಾಡಲಾಗಿದೆ

ಈ) ಬೆಂಬಲ ಬೆಲೆ ಯೋಜನೆಯಲ್ಲಿ ರೈತರ ಕೃಷಿ ಉತ್ಪನ್ನಗಳನ್ನು ಖರೀದಿಸಲಾಗುತ್ತಿದೆ